ಬಗ್ಗೆ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ಪ್ರಧಾನ ಮಂತ್ರಿಗಳಿಗೆ ಮತ್ತೆ ಒತ್ತಾಯ ಮಾಡೋಣ ಮತ್ತು ನಮಗೆ ನ್ಯಾಯ ತೆಗೆದುಕೊಳ್ಳುವ ದಿಕ್ಕಿನಲ್ಲಿ ಪ್ರಯತ್ನ ಮಾಡೋಣ.

ಗ್ರಾಮೀಣ ಮಟ್ಟದಲ್ಲಿ ಮಳೆ ನೀರು ಸಂಗ್ರಹಣೆ

ಶ್ರೀ ಐವಾನ್ ನಿಗ್ಲಿ (ನಾಮಾಂಕಿತ):-

188(1406) ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಸರ್ಕಾರವು ರಾಜ್ಯದ ಬರಗಾಲ ಪೀಡಿತ ಗ್ರಾಮಗಳಲ್ಲಿ ಮಳೆನೀರು ಕೊಯ್ಲು ವಿಧಾನ ಅಳವಡಿಸುವ ಪ್ರಸ್ತಾಪ ಹೊಂದಿದೆಯೇ;

(ಆ) ಹೌದಾಗಿದ್ದಲ್ಲಿ, ವಿವರಗಳನ್ನು ಒದಗಿಸುವುದು;

(ಇ) ಇದಕ್ಕಾಗಿ ಕೇಂದ್ರದಿಂದ ನೀಡಿರುವ ಸಹಾಯಧನವೇನು ಮತ್ತು ರಾಜ್ಯದ ಪಾಲೇನು; (ವಿವರಗಳನ್ನು ಒದಗಿಸುವುದು)

(ಈ) ಇದರ ಬಗ್ಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳಾವುವು?

(A) Whether the Government has any proposals for rain water harvesting in drought prone villages of the State;

(B) If yes, (details be furnished)

(C) The subsidy given by the Central Government and the State's share; (details be furnished)

(D) The measures taken by the Government to enlighten the general public?

ಶ್ರೀ ಎಸ್.ಎ.ರವೀಂದ್ರನಾಥ್ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು):-

(ಅ) ಹೌದು.

(ಆ) ಅಂತರ್ಜಲ ಆಧಾರಿತ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳ ನಿರಂತರತೆ

ಕಾಪಾಡಲು ಮತ್ತು ಅವುಗಳ ಮೇಲಿನ ಒತ್ತಡ ಕಡಿಮೆ ಮಾಡಲು ಮನೆಯ ಮೇಲ್ಛಾವಣಿ ಹಾಗೂ ಭೂಮಿಯ ಮೇಲೆ ಹರಿದು ಹೋಗುವ ಮಳೆ ನೀರಿನ ಕೊಯ್ಲು ವಿಧಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

(ಇ) ಇದಕ್ಕಾಗಿ ಸಹಾಯಧನವಿರುವುದಿಲ್ಲ. ಅದಾಗ್ಯೂ ರಾಜ್ಯದ ಪರಿಶಿಷ್ಟ ಜಾತಿ/ಪಂಗಡ ಹಾಗೂ ಹಿಂದುಳಿದ ವರ್ಗದ 1000 ಕುಟುಂಬಗಳಿಗೆ ಮನೆ ಮೇಲ್ಛಾವಣಿಯ ಮಳೆ ನೀರು ಸಂಗ್ರಹಣೆ ಪದ್ಧತಿ ಅಳವಡಿಸಿಕೊಳ್ಳುವ ಸಲುವಾಗಿ ಅಗತ್ಯ ಪರಿಕರಗಳನ್ನು ಒದಗಿಸಿಕೊಳ್ಳಲು ತಲಾ ಕುಟುಂಬಕ್ಕೆ ರೂ.5,000/–ದಂತೆ ಒಂದು ಬಾರಿಯ ಉತ್ತೇಜನವಾಗಿ ಕುಡಿಯುವ ನೀರಿನ ಗುಣಮಟ್ಟದ ಭಾದೆಗೊಳಗಾಗಿರುವ ಜನವಸತಿಗಳಲ್ಲಿ ಈ ಸೌಲಭ್ಯವನ್ನು ನೀಡಲಾಗಿದೆ.

(ಈ) ಅರಿವು ಮೂಡಿಸುವ ಚಟುವಟಿಕೆಗಳನ್ನು ಅನುಬಂಧ–1ರಲ್ಲಿ ವಿವರಿಸಿರುವಂತೆ ನಿರಂತರವಾಗಿ ನಡೆಸಲಾಗುತ್ತಿದೆ.

(A) Yes.

(B) To ensure the sustainability of Ground water based Public Drinking Water sources and to reduce the stress on them, Roof Top and Surface Rain Water Harvesting System is under implementation. The details are furnished vide Annexure-I

(C) There is no subsidy for this. However, as an one time encouragement, a subsidy of Rs.5,000/- per house has been provided to 1000 families of the State belonging to SC/ST/BCM category who are living in the Water Quality affected areas, for enabling them to procure the implements/equipments for adoption of Roof Top Rain Water Harvesting System.

(D) IEC activities are being done continuously, as explained in the Annexure-I

Starred LAQ No.1406 - Annexure-I / ಅನುಬಂಧ-1

Under Suvarna Jal programme, Roof Top and Surface Rain Water Harvesting works are being taken up on a massive scale.

(i) Water re-charge measures viz infiltration well, check dams,percolation tanks, recharge pits, injection well, recharge wells, rain water harvesting, desiltation of tanks, low cost bandaras are being constructed.

(ii) In about 23,683 Rural schools Roof Top Rain Water Harvesting methods are being adopted at an estimated cost of Rs.75.00 Crore. Required funds have been released already both under Central and State sector.

(iii) In all the 176 taluks Roof Top Harvesting has been Demonstrated at the selected Navagramas/Housing colonies and District Level Re-source Centers have been established through Nirmithi kendras and RGHC.

(iv) Rs.5000/- subsidy has been given to BPL/SC/ST households living in the habitations, which have water quality problem, to own the implements to harvest roof top rain water. This has been done in 1000 villages covering 20,000 households

(v) Government have also brought into force the Act called Karnataka Ground water (Regulation for Protection of drinking water) Act, 1999. As per this act, no well could be drilled within the radius of 500 meters of public source of drinking water. Any existing private well which affects the public source could be seized permanently or temporarily providing the compensation as per the provisions of LAA 1894, based on the recommendation of Geologist. There is also

provision in the act to punish the offenders and impose penalty on those who violates any rule made under this Act with maximum R.5000/- fine and one year imprisonment.

(vi) 20% tax rebate is in force from 1.9.2005 in respect of people who adopts rain water harvesting system in their buildings. GPs have been advised to adopt by-law to enforce compulsory rain water harvesting in the construction of new buildings at all levels while grating licences.

(vii) All government buildings and public offices are now adopting rain water harvesting methods and public awareness is being created in a continued process with an integrated approach. Street plays, AIR and Doordarshan programmes as well as distribution of Pamphlets are being done to create required awareness and sense of responsibility among Rural Populace about the importance of Rain Water Harvesting

(viii) Divisional, District level and Taluk level Work shops and Seminars have been conducted throughout the state under IEC activities to motivate people in this endeavour, KSCST technical assistance has been availed in this connection.

(ix) All the existing and new water supply schemes are being connected with the suitable artificial recharge measures, keeping in view the sustainability of the public water supply sources. Every year, minimum 5% of total ARWSP and MNP grants are being utilized for this purpose. In addition to this, the works undertaken under 12th Finance Commission Funds, Hariyali, Jalnidhi, NREG and CRF are also supplementing this cause, since emphasis is being given for Rain Water Harvesting system.

(X) A pilot project called **Sachetana** at a cost of Rs.14.50 crore covering 60 water quality affected habitations of 4 taluks has been sanctioned to provide permanent alternate solution for sustainability of the schemes as weel as to have check on the increasing fluoride content in the ground water source, through roof top and surface rain water harvesting methods. BAIF, and NGO recognised by government has been entrusted with this task wherein the project will be taking care of IEC activities, health aspects, increasing of agricultural production and exploring avenues for year round employment.

ಶ್ರೀ ಐವಾನ್ ನಿಗ್ಲಿ:– ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಬರಪೀಡಿತ ಗ್ರಾಮಗಳಲ್ಲಿ ಮಳೆ ನೀರು ಸಂಗ್ರಹಣೆಗೆ ಎಷ್ಟು familyಗಳಿಗೆ ಹಣ ಕೊಟ್ಟಿದ್ದೀರಿ ಎಂದು ಕೇಳಿರುವಂತಹ ಪ್ರಶ್ನೆಗೆ 1,000 familiesಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಬರಪೀಡಿತ ಪ್ರದೇಶ ಸುಮಾರು ಕೊಪ್ಪಳ, ಬಾಗಲಕೋಟೆ, ಬೆಳಗಾಂ, ಜಮಖಂಡಿ, ಬಳ್ಳಾರಿ ಮತ್ತು ಗುಲ್ಬರ್ಗ ಇದೆ. ಮಾನ್ಯ ಮಂತ್ರಿಗಳು ಪ್ರತಿಯೊಂದು ಜಿಲ್ಲೆಯಲ್ಲಿ ಎಷ್ಟು ಮನೆಗಳಿಗೆ ದುಡ್ಡು ಕೊಟ್ಟಿದ್ದಾರೆಂದು ಹೇಳಬೇಕು. ಈ ಬರಪೀಡಿತ ಪ್ರದೇಶದಲ್ಲಿ Rain water harvestingಗೆ SC/ST ಮತ್ತು BCM categoryಗೆ ಕೊಟ್ಟಿದ್ದಾರೆ. ಅವರಿಗೆ ಮಾತ್ರ ಏಕೆ ಕೊಟ್ಟಿದ್ದೀರಿ? ಇದು ಬಡವರಿಗೆ ಎಲ್ಲರಿಗೂ ಕೊಡಬೇಕು. ಬರಪೀಡಿತ ಪ್ರದೇಶದಲ್ಲಿ ಎಲ್ಲೆಲ್ಲಿ ಮನೆಗಳು ಇವೆ, ಅಲ್ಲೆಲ್ಲಾ ಕನಿಷ್ಟ 5,000 ರೂಪಾಯಿಯನ್ನು ಕೊಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎ. ರವೀಂದ್ರನಾಥ್:– ಮಾನ್ಯ ಅಧ್ಯಕ್ಷರೆ, ಅಧಿಕವಾಗಿ fluoride ಅಂಶ ಇರತಕ್ಕಂಥ ಭಾಗಗಳಲ್ಲಿ ಸುಮಾರು 1,000 ಗ್ರಾಮಗಳಲ್ಲಿ 20,000 SC/ST ಮತ್ತು BPL ಕುಟುಂಬಗಳಿಗೆ ಮನೆಯ ಮೇಲ್ಛಾವಣಿ ನೀರು ಸಂಗ್ರಹಣೆ ಪರಿಕರಗಳನ್ನು ಮಳೆಯ ನೀರು ಸುಗ್ಗಿ ಅಂದೋಲನ ಅಡಿ ಅಳವಡಿಸುವುದಕ್ಕೆ ಕೊಟ್ಟಿದ್ದೇವೆ. ಪ್ರತಿ ಮನೆಗಳಿಗೂ 5,000 ರೂಪಾಯಿ ಆ ರೀತಿ ಗುರುತು ಮಾಡಿ ಕೊಟ್ಟಿರುವುದು.

ಶ್ರೀ ಐವಾನ್ ನಿಗ್ಲಿ:– ನೀವು 1,000 familiesಗೆ ಏನು ಕೊಟ್ಟಿದ್ದೀರಿ. ಅದು ಯಾವ್ಯಾವ areaಗೆ ಕೊಟ್ಟಿದ್ದಾರೆ ಎಂದು ನಮಗೆ ಹೇಗೆ ಗೊತ್ತು? ಅದನ್ನು ಒಂದೇಕಡೆ

ಕೊಟ್ಟಿದ್ದರೆ? ಅದನ್ನು ಯಾವ್ಯಾವ areaಗೆ ಕೊಟ್ಟಿದ್ದಾರೆ ಎಂದು ಹೇಳಬೇಕು. ಬರಪೀಡಿತ ಪ್ರದೇಶಗಳಾದ ಕೊಪ್ಪಳ, ಬೆಳಗಾಂ, ಬಾಗಲಕೋಟೆ, ಜಮಖಂಡಿ, ಬಿಜಾಪುರ ಮತ್ತು ಗುಲ್ಬರ್ಗ ಹೀಗೆ district wise ಎಷ್ಟು ಕೊಟ್ಟಿದ್ದೀರಿ ಎಂದು ಹೇಳಬೇಕು.

ಶ್ರೀ ವೆಂಕಟಾಚಲ ಶೆಟ್ಟಿ ಕಲ್ಯಾಣ ಮಂಟಪದ ದುರಸ್ಥಿ

ಶ್ರೀ ತಿಪ್ಪಾರೆಡ್ಡಿ ಜಿ.ಹೆಚ್. (ಚಿತ್ರದುರ್ಗ):–

189(748) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ.

(ಅ) ಶ್ರೀ ವೆಂಕಟಾಲಶೆಟ್ಟಿ ಇವರು ದಾನವಾಗಿ ಚಿತ್ರದುರ್ಗ ತಾಲ್ಲೂಕು ಪಂಚಾಯ್ತಿಗೆ ಕಲ್ಯಾಣ ಮಂಟಪವನ್ನು ನೀಡಿರುವುದು ಸರಿಯೇ; ಈ ಉದಾರವಾಗಿ ದಾನ ಮಾಡಿರುವ ಕಟ್ಟಡದ ನಿರ್ವಹಣೆ ಬಗ್ಗೆ ಸರ್ಕಾರ ಗಮನ ಹರಿಸುವುದೇ;

(ಆ) ಈ ರೀತಿ ದಾನವಾಗಿ ನೀಡಿರುವ ಕಲ್ಯಾಣ ಮಂಟಪದ ದುರಸ್ತಿಯ ಕಾರ್ಯಕ್ಕಾಗಿ ಇದುವರೆಗೆ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

ಶ್ರೀ ಸಿ.ಎಂ.ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):–

(ಅ) ಶ್ರೀ ಲಕ್ಷ್ಮೀ ವೆಂಕಟಾಚಲ ಶೆಟ್ಟಿ ಇವರು ಕಲ್ಯಾಣ ಮಂಟಪವನ್ನು ಚಿತ್ರದುರ್ಗ ತಾಲ್ಲೂಕು ಪಂಚಾಯತಿಗೆ ದಾನವಾಗಿ ನೀಡಿರುವುದು ಸರಿಯಾಗಿದೆ.

ಈ ಕಟ್ಟಡವನ್ನು ದಿನಾಂಕ 01–04–1959ರಂದು ತಾಲ್ಲೂಕು ಪಂಚಾಯತಿ ವಶಕ್ಕೆ ತೆಗೆದುಕೊಂಡಿರುತ್ತದೆ ಮತ್ತು ಅಂದಿನ ತಾಲ್ಲೂಕು ಅಭಿವೃದ್ಧಿ ಮಂಡಳಿಯವರು ಈ ಕಟ್ಟಡವನ್ನು ಬಾಡಿಗೆ ಆಧಾರದ ಮೇಲೆ ಶ್ರೀ ಜಗದ್ಗುರು ಮಲ್ಲಿಕಾರ್ಜುನ ಮುರುಘರಾಜೇಂದ್ರ ಇಂಜಿನೀಯರಿಂಗ್ ಕಾಲೇಜ್ ಹಾಸ್ಟೆಲ್‌ಗಾಗಿ ನೀಡಲಾಗಿದೆ.

(ಆ) ಸದರಿ ಕಟ್ಟಡದ ದುರಸ್ಥಿಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಶ್ರೀ ಜಿ.ಹೆಚ್. ತಿಪ್ಪಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಲಕ್ಷ್ಮೀ ವೆಂಕಟಾಚಲ ಶೆಟ್ಟಿಯವರು ಕಲ್ಯಾಣ ಮಂಟಪವನ್ನು ದಾನ ಮಾಡಿರುವುದು ನಿಜವೆಂದು ಹೇಳುತ್ತಿದ್ದಾರೆ. ಅಲ್ಲಿ ಯಾವುದೇ ದುರಸ್ಥಿ ಕೆಲಸವನ್ನು ಮಾಡಿಲ್ಲವೆಂದು ಹೇಳುತ್ತಿದ್ದಾರೆ. ನಾನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟ ಪಡುವುದೇನೆಂದರೆ ಸುಮಾರು 1959ನೇ ಇಸವಿಯಲ್ಲಿ ಲಕ್ಷ್ಮೀ ವೆಂಕಟಾಚಲ ಶೆಟ್ಟಿಯವರು ಚಿತ್ರದುರ್ಗದ ನಮ್ಮ district hospitalಗೆ ಬರುವಂತಹ